# ನಾ. ಡಿಸೋಜ: ವೀರವನಿತೆ ರಾಣಿ ಚೆನ್ನಮ್ಮ

ಸಿದ್ದರಾಜು ಎಸ್.ಪಿ.* & ವಿಶ್ವನಾಥ**

DOI: https://doi.org/10.5281/zenodo.22301908

**ABSTRACT**

ನಾ. ಡಿಸೋಜ ಅವರ ವಿರಚಿತ 'ಚೆನ್ನಿ ಚೆನ್ನಮ್ಮ ಚೆನ್ನಮ್ಮಾಜಿ' ಕಾದಂಬರಿಯನ್ನಾಧರಿಸಿ ಕೆಳದಿ ರಾಣಿ ಚೆನ್ನಮ್ಮನ ಐತಿಹಾಸಿಕ ಹಾಗೂ ಸಾಹಸಮಯ ಬದುಕಿನ ಚಿತ್ರಣವನ್ನು ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. ಕೋಟಿಪುರದ ಸಾಮಾನ್ಯ ಹೆಣ್ಣುಮಗಳಾದ ಚೆನ್ನಿ, ಅರಸ ಸೋಮಶೇಖರ ನಾಯಕನ ಪತ್ನಿಯಾಗಿ, ಪಿತೃಪ್ರಧಾನ ಸಮಾಜದ ತಾರತಮ್ಯ ಹಾಗೂ ವಿರೋಧಗಳನ್ನು ದಿಟ್ಟತನದಿಂದ ಮೆಟ್ಟಿ ನಿಂತು 'ಮಹಾರಾಣಿ ಚೆನ್ನಮ್ಮಾಜಿ'ಯಾಗಿ ಬೆಳೆದ ರೋಚಕ ಹಾದಿಯನ್ನು ನಿರೂಪಿಸಲಾಗಿದೆ. ಆಂತರಿಕ ದ್ರೋಹಿಗಳನ್ನು ಸದೆಬಡಿದು, ಪ್ರಜಾನುರಾಗಿಯಾಗಿ ದಕ್ಷ ಆಡಳಿತ ನೀಡಿದ ಆಕೆಯ ಸಾಧನೆಗಳು ಅವಿಸ್ಮರಣೀಯ. ಛತ್ರಪತಿ ಶಿವಾಜಿಯ ಮಗ ರಾಜರಾಮನಿಗೆ ಅಭಯ ನೀಡಿ, ದೆಹಲಿಯ ಸುಲ್ತಾನ ಔರಂಗಜೇಬನ ಬೃಹತ್ ಸೇನೆಯನ್ನು ಹಿಮ್ಮೆಟ್ಟಿಸಿದ ಆಕೆಯ ಶೌರ್ಯವನ್ನು ಎತ್ತಿಹಿಡಿಯಲಾಗಿದೆ. ಸ್ತ್ರೀಯರು ಕೇವಲ ಅಬಲೆಯರಲ್ಲ; ಅವರ ಬುದ್ಧಿವಂತಿಕೆ, ದೂರದೃಷ್ಟಿ, ಸಂಘಟನಾ ಕೌಶಲ್ಯ ಮತ್ತು ಆಡಳಿತಾತ್ಮಕ ನಿಪುಣತೆಯು ಅವರನ್ನು ಸಶಕ್ತ ನಾಯಕಿಯರನ್ನಾಗಿಸುತ್ತದೆ ಎಂಬ ಸ್ತ್ರೀಪರ ಕಾಳಜಿಯ ಉದಾತ್ತ ಆಶಯವನ್ನು ಈ ಬರಹವು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸುತ್ತದೆ.

**KEYWORDS**: ನಾ. ಡಿಸೋಜ, ಕೆಳದಿ ರಾಣಿ ಚೆನ್ನಮ್ಮ, ಮಹಿಳಾ ಸಾಹಿತ್ಯ, ಸ್ತ್ರೀಪರ ಕಾಳಜಿ, ಶೌರ್ಯ ಮತ್ತು ಆಡಳಿತ.

* **ಸಿದ್ದರಾಜು ಎಸ್.ಪಿ.,** ಸಂಶೋಧನಾ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು.

** **ಡಾ. ವಿಶ್ವನಾಥ,** ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಆಧುನಿಕ ಕನ್ನಡ ಸಾಹಿತ್ಯ ಅನೇಕ ಪ್ರಕಾರಗಳಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅವುಗಳಲ್ಲಿ ಮಹಿಳಾ ಸಾಹಿತ್ಯ ಪ್ರಮುಖವಾಗಿದೆ. ಶಿಕ್ಷಣದ ಮೂಲಕ ಮಹಿಳೆಯರು ಒಂದು ಉತ್ತಮ ಸಾಮಾಜಿಕ ಜೀವನ ಮಾಡಲು ದಾರಿಯಾಯಿತು. ಇಂದು ಮಹಿಳಾ ಸಮೂಹದ ಶೈಕ್ಷಣಿಕ ಪ್ರಗತಿ ಅನೇಕ ವಿಧಗಳಲ್ಲಿ ಪ್ರಗತಿಯಾಗಿದೆ. ಮಹಿಳೆಯ ಸಾಹಿತ್ಯ ರಚನೆಯು ಫಲಪ್ರದವಾಗಿದೆ. ಈ ನಿಟ್ಟಿನಲ್ಲಿ ಕನ್ನಡದ ಅನೇಕ ಮಹನೀಯರು ಸ್ತ್ರೀಪರವಾದ ಕಾಳಜಿಯ ಆಶಯಗಳನ್ನು ಕುರಿತು ಕಥೆ, ಕವನ, ಕಾದಂಬರಿ, ನಾಟಕಗಳನ್ನು ರಚಿಸುತ್ತಿರುವುದು ಕನ್ನಡ ಸಾಹಿತ್ಯದ ಓದಿನಿಂದ ಅರಿವಿಗೆ ಬಂದಿದೆ. ಅಂಥ ಒಂದು ದಿಟ್ಟ ಬರವಣಿಗೆ ನಾ.ಡಿಸೋಜ ಅವರ ಕಾದಂಬರಿ ಚೆನ್ನಿ ಚೆನ್ನಮ್ಮ ಚೆನ್ನಮ್ಮಾಜಿ.

ನಾ.ಡಿಸೋಜ ಅವರು ಕನ್ನಡ ನಾಡಿನ ಕೆಚ್ಚೆದೆಯ ರಾಣಿ ಕೆಳದಿ ಚೆನ್ನಮ್ಮಳ ಚರಿತೆಯನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಕ್ರಿ.ಶ.1672 ರಿಂದ 1697 ರವರೆಗೆ 25 ವರ್ಷಗಳ ಕಾಲ ಕೆಳದಿ ರಾಜ್ಯವನ್ನು ಆಳ್ವಿಕೆ ಮಾಡಿದ ಚೆನ್ನಮ್ಮಳ ಜೀವನ ಕಥನವೇ ಈ ಕಾದಂಬರಿ. ಸುಧಾ ವಾರ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಕಾದಂಬರಿ 2001ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಚೆನ್ನಿ ಚೆನ್ನಮ್ಮಳಾಗಿ ಚೆನ್ನಮ್ಮಾಜಿಯಾಗಿ ಒಂದು ರಾಜ್ಯದ ಮಹಾರಾಣಿಯಾಗಿ ಅಧಿಕಾರದ ಗದ್ದುಗೆಯನ್ನೇರಿ ಪಿತೃಪ್ರಧಾನವಾದ ಭಾರತೀಯ ಸಮಾಜದಲ್ಲಿ ಶ್ರೇಷ್ಠ ರಾಣಿಯಾಗಿ ಉತ್ತಮ ಆಡಳಿತಗಾರ್ತಿಯಾಗಿ ದಕ್ಷವಾಗಿ ಆಡಳಿತ ನಿರ್ವಹಿಸಿದ ರಾಣಿಚೆನ್ನಮ್ಮ ಕರ್ನಾಟಕದ ಇತಿಹಾಸದಲ್ಲಿ ಅವಿಸ್ಮರಣೀಯ.

ಕೋಟಿಪುರದ ಶ್ರೀಮಂತ ವ್ಯಾಪಾರಿ ಸಿದ್ದಪ್ಪಶೆಟ್ಟಿ ಹಾಗು ಪಾರ್ವತಮ್ಮನ ಮಗಳು ಚೆನ್ನಿ, ಒಬ್ಬ ಸಾಧಾರಣ ಹೆಣ್ಣುಮಗಳು ಕೋಟಿಪುರದ ಗುಡಿ ಕೆರೆ ಎಂದೆಲ್ಲಾ ಅಲೆದಾಡುತ್ತ ಗೆಳತಿಯರೊಡನೆ ತುಂಟಾಟವಾಡುತ್ತಾ ಬೆಳೆದ ದಿಟ್ಟ ಸಾಹಸಿ ಹೆಣ್ಣು. ತನ್ನ ಗೆಳತಿಯರು ಕೆರೆಯ ನೀರಿನಲ್ಲಿ ಮುಳುಗಿದಾಗ ಅವರನ್ನು ಮೇಲೆ ಎತ್ತಿದಂತಹ ಸಾಹಸಿ ಚೆನ್ನಮ್ಮ, ದಿಟ್ಟೆಯಂತೆ ಸೌಂದರ್ಯವತಿಯು ಆಗಿದ್ದಳು. ಅವಳನ್ನು ಕಂಡು ಮನಸೋತ ಸೋಮಶೇಖರ ನಾಯಕ ಆಕೆಯನ್ನು ವಿವಾಹವಾದನು. ಸಾಮಾನ್ಯಳಾಗಿದ್ದ ಚೆನ್ನಮ್ಮ, ಚೆನ್ನಮ್ಮರಾಣಿಯಾದಳು. ಮದುವೆಯಾಗಿ ಹೊಸದರಲ್ಲಿ ಅರಮನೆಗೆ ಬಂದ ಚೆನ್ನಮ್ಮಾಳಿಗೆ ಅರಮನೆಯ ವಾತಾವರಣ, ಅಲ್ಲಿನ ನೀತಿ-ನಿಯಮಗಳು, ನಡತೆಗಳು, ಅಲ್ಲಿನ ಜನರನ್ನು ಕಂಡು ಅಚ್ಚರಿಗೊಳ್ಳುವಳು, ಹಿರಿಯಜ್ಜಿ ಮುರಿಗೆಮ್ಮನನ್ನು "ಅಜ್ಜಿ.... ಈ ಯುದ್ಧ ಯಾಕೆ ಬೇಕೆ"[1] ಎಂದು ಪ್ರಶ್ನೆ ಮಾಡುವಳು. ಇಲ್ಲಿ ಆಕೆಯ ಮುಗ್ಧ ಮನಸ್ಸನ್ನು ನಾವು ಗಮನಿಸಬಹುದು. ಚೆನ್ನಮ್ಮ ನಿಧಾನವಾಗಿ ಅರಮನೆ ವಾತಾವರಣ ಅಲ್ಲಿನ ಸಂಸ್ಕೃತಿ ನಡತೆಗೆ ಒಗ್ಗಿಕೊಳ್ಳುತ್ತಾಳೆ. ಕುದುರೆ ಸವಾರಿ, ಕತ್ತಿವರೆಸೆ ಮುಂತಾದವುಗಳನ್ನು ಕಲಿಯುತ್ತಾಳೆ.

ದೊರೆ ಸೋಮಶೇಖರ ನಾಯಕನಿಗೆ ಮದುವೆಯಾಗಿ ಸುಮಾರು ವರ್ಷ ಮಕ್ಕಳಿಲ್ಲದಿದ್ದರಿಂದ ಆ ಕೊರಗು ಅವನನ್ನು ಕಾಡುತ್ತದೆ. ಅದಕ್ಕಾಗಿ ಮಸೂರ

ಮಾವುತನ ಬಳಿ ಔಷಧಿ ತೆಗೆದುಕೊಳ್ಳುತ್ತಾನೆ. ಜಿನೋಙಪಂತ ಎಂಬ ಸೇನಾಧಿಪತಿಯು ಬರಮೆ ಮಾವುತನಿಗೆ ಆಮಿಷ ಒಡ್ಡಿ ಔಷಧಿಯಲ್ಲಿ ವಿಷ ಬೆರೆಸುವಂತೆ ಹೇಳುತ್ತಾನೆ. ಅವನ ಮಾತು ಕೇಳಿದ ಮಾವುತ ಸೋಮಶೇಖರ ನಾಯಕನಿಗೆ ಔಷಧಿಯಲ್ಲಿ ವಿಷ ಬೆರೆಸಿ ನಿಧಾನವಾಗಿ ದುರ್ಬಲನಾಗುವಂತೆ ಮಾಡುತ್ತಾನೆ. ಔಷಧಿಯ ದಾಸನಾಗುವಂತೆ ಮಾಡುತ್ತಾನೆ, ಜನತೆಯಲ್ಲಿ ನಾಯಕನ ಬಗ್ಗೆ ಅಪನಂಬಿಕೆ ಬರುವಂತೆ ಮಾಡುತ್ತಾನೆ. ನಾಯಕ ದುರ್ಬಲನಾದಂತೆ ಕೆಳದಿಯ ಕೊಡಸೆ ಕೋಟೆಯನ್ನು ಜಿನೋಙಪಂತ ಆಕ್ರಮಿಸಿಕೊಳ್ಳುತ್ತಾನೆ. ಸತ್ಯದ ಅರಿವಾದ ನಾಯಕ ಜಿನೋಙಪಂತನ ಸೈನಿಕರ ವಿರುದ್ಧ ಹೋರಾಡಿ ಮರಣ ಹೊಂದುತ್ತಾನೆ.

ಕೆಳದಿ ರಾಜ್ಯಕ್ಕೆ ಮುಂದಿನ ವಾರಸುದಾರ ಯಾರು ಇಲ್ಲದ ಕಾರಣ ಹಲವರ ಕಣ್ಣು ರಾಜ್ಯದ ಸಿಂಹಾಸನದ ಮೇಲೆ ಬೀಳುತ್ತದೆ. ಈ ಸಮಯದಲ್ಲಿ ರಾಜ್ಯದ ಜವಾಬ್ದಾರಿಯನ್ನು ಚೆನ್ನಮ್ಮ ತೆಗೆದುಕೊಂಡು ಜಿನೋಙಪಂತನ ವಿರುದ್ಧ ದಂಡೆತ್ತಿ ಹೋಗಿ ಅವನನ್ನು ಓಡಿಸುತ್ತಾಳೆ. ಒಬ್ಬ ಶ್ರೇಷ್ಠ ಸಂಘಟನಾಕಾರಿಯಾಗಿ ಈ ಸಮಯದಲ್ಲಿ ಚೆನ್ನಮ್ಮ ಪ್ರಧಾನಮಂತ್ರಿ ಸೇನಾಧಿಕಾರಿಗಳು ಮಠಾಧೀಶರು ರಾಜ್ಯದ ಹಿರಿಯರು ಮತ್ತು ಗಣ್ಯರು ಎಲ್ಲಾ ಮುಖ್ಯಸ್ಥರನ್ನು ಸಂಘಟಿಸುತ್ತಾಳೆ. ರಾಜನ ಜೊತೆ ಮಾತನಾಡುವಾಗ, ಸಂವಾದ ಮಾಡುವಾಗ ಆತ ಹೇಳಿದ ಎಷ್ಟೋ ವಿಷಯಗಳು ಆಕೆಯ ಮುಂದಿನ ರಾಜಕೀಯ ನಡೆಗೆ ದಾರಿದೀಪವಾಗುತ್ತವೆ.

ರಾಜಕೀಯದ ಬಗ್ಗೆ ಕಿಂಚಿತ್ತು ಗೊತ್ತಿಲ್ಲದ ಚೆನ್ನಮ್ಮ ಎಲ್ಲರನ್ನೂ ಸಂಘಟಿಸಿ ಎಲ್ಲಾ ಅಧಿಕಾರಿಗಳನ್ನು ಕಾರ್ಯಶೀಲರನ್ನಾಗಿ ಮಾಡಿ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುತ್ತಾಳೆ. ಹುಟ್ಟು ನಾಯಕತ್ವದ ಗುಣ ಹೊಂದಿದ ಚೆನ್ನಮ್ಮ ಯಾವ ರಾಜಮನೆತನದ ಮಹಿಳೆಗೂ ಕಡಿಮೆ ಇಲ್ಲದ ಹಾಗೆ ಆಳ್ವಿಕೆಯನ್ನು ಪ್ರಾರಂಭಿಸುತ್ತಾಳೆ. ಇದರಿಂದ ಜನರಲ್ಲಿ ಅವಳ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಿ ಜನ ಆಕೆಯ ಬಗ್ಗೆ ಗೌರವ ತಾಳುತ್ತಾರೆ. ಸೋಮಶೇಖರ ನಾಯಕನನ್ನು ಮದುವೆಯಾದ ಮೇಲೆ ಹಲವು ಗ್ರಂಥಗಳ ಓದು, ಕುದುರೆ ಸವಾರಿ, ಕತ್ತಿವರೆಸೆ ಮುಂತಾದವುಗಳನ್ನು ಕಲಿಯುವುದರ ಜೊತೆಗೆ ರಾಜಕೀಯದ ಆಡಳಿತದ ಬಗ್ಗೆ ಅವಳು ಅರಿವನ್ನು ಮೂಡಿಸಿಕೊಂಡಿರುತ್ತಾಳೆ. ನಮ್ಮ ಭಾರತೀಯ ಪಿತೃ ಪ್ರಧಾನ ಸಂಸ್ಕೃತಿಯಲ್ಲಿ ಹೆಣ್ಣನ್ನು ಪುರುಷ ತನ್ನ ಅಧೀನ ಮಾಡಿಕೊಂಡು ಆಕೆಯನ್ನು ಅಡುಗೆ ಮನೆಯ ನಾಲ್ಕು ಗೋಡೆಗಳಿಗೆ ಅಂತಃಪುರದ ನಾಲ್ಕು ಗೋಡೆಯ ಒಳಗೆ ಇರಿಸಿ ಪತಿಯೇ ಪರಮದೈವ ಎಂದು, ಪತಿಯ ಮರಣದ ಜೊತೆಗೆ ಆಕೆ ಮರಣ ಹೊಂದಬೇಕು ಎಂಬ ಸತಿಸಹಗಮನ ಪದ್ಧತಿಯನ್ನು ಸ್ತ್ರೀಯ ಮೇಲೆ ಏರಿದಂತಹ ಕಾಲಘಟ್ಟದಲ್ಲಿ ರಾಣಿ ಚೆನ್ನಮ್ಮ ಕೆಳದಿ ರಾಜ್ಯದ ಪ್ರಥಮ ರಾಣಿಯಾಗಿ ಸಿಂಹಾಸನವೇರುವುದು ಒಂದು ಕ್ರಾಂತಿಯೇ ಸರಿ.

ಕೆಳದಿ ರಾಜ್ಯದ ಮುಂದಿನ ವಾರಸುದಾರರು ಯಾರಾಗುವವರು ಎಂಬ ಪ್ರಶ್ನೆ ಭುಗಿಲೆದ್ದಾಗ "ಕೋಟೆಪುರದ ಸಿದ್ದಪ್ಪ ಶೆಟ್ಟಿ ಮಗಳು.... ತಕ್ಕಡಿ ಹಿಡಿಯಲು ಬರುತ್ತದೆ ಅವಳಿಗೆ.... ತಂಬಾಕು ತೂಗಿಯಾಳು....."[2] ಎಂದು ಠಾಣೇದಾರರು ಚೆನ್ನಮ್ಮನ ಬಗ್ಗೆ

ವ್ಯಂಗ್ಯವಾಗಿ ಮಾತನಾಡಿಕೊಳ್ಳುತ್ತಾರೆ. ಹೆಂಗಸಿನ ಕೈಕೆಳಗೆ ಆಳಲ್ಪಡಬೇಕೆಂಬ ಅಸಮಾಧಾನ ಕೆಲವರಲ್ಲಿ ಭುಗಿಲೇಳುತ್ತದೆ. ಕೆಲಮಂತ್ರಿಗಳು "ಹೆಂಗಸರ ಕೈಕೆಳಗೆ ಕೆಲಸ ಮಾಡುವ ಕಾಲ ಬಂತೇ?"[3] ಎಂದು ಗೊಣಗಿದರು. ಚೆನ್ನಮ್ಮ ರಾಣಿಯಾಗುವುದನ್ನು ಜನರು ಒಪ್ಪಿಕೊಂಡರು, ಸೇನೆ, ಸೇನೆಯ ದಳಪತಿ, ದಳವಾಯಿ, ದಂಡನಾಯಕರು ಒಪ್ಪಲು ಸಿದ್ದರಿರಲಿಲ್ಲ. ಇದು ತಮ್ಮ ಗಂಡಸುತನಕ್ಕೆ ಅವಮಾನ ಎಂದು ಅವರು ತಿಳಿದಿದ್ದರು.

ಚೆನ್ನಮ್ಮ ರಾಜ್ಯದ ಸಿಂಹಾಸನವನ್ನು ಏರುವುದನ್ನ ಸಹಿಸದ ಅಂಧಕ ವೆಂಕಟಪ್ಪ, ಬಸವಲಿಂಗ ನಾಯಕರು ಇತರರ ಸಹಾಯ ಪಡೆದು ಸಿಂಹಾಸನಕ್ಕಾಗಿ ದಾಳಿ ಮಾಡಿದರು. ಈ ಯುದ್ಧದ ಫಲಿತಾಂಶವಾಗಿ ಬರಮೆ ಮಾವುತ ಮುಂತಾದ ದ್ರೋಹಿಗಳ ವಧೆ ಆಯಿತು, ಚೆನ್ನಮ್ಮ ದೂರದೃಷ್ಟಿಯುಳ್ಳ ಪ್ರಜಾಹಿತ ಚಿಂತಕಿಯಾಗಿದ್ದು, ನಾಡಿನ ರಕ್ಷಣೆಗಾಗಿ ಯುದ್ಧವು ಅನಾಹುತದ ಹಂತವನ್ನು ತಲುಪುವ ಮುನ್ನವೇ ಯುದ್ಧ ನಿಲ್ಲಿಸಿ ತಂದೆ ಮತ್ತು ಆಪ್ತರೊಂದಿಗೆ ಕವಲೇದುರ್ಗಕ್ಕೆ ಹೋಗಿ ರಕ್ಷಣೆ ಪಡೆಯುತ್ತಾಳೆ.

ಅಂಧಕನ ಮಗ ಶಿವಪ್ಪ ನಾಯಕ ರಾಜ್ಯದ ಒಡೆಯನಾದ, ಈ ಮಧ್ಯೆ ಕಾಸರಗೋಡು ತಿಮ್ಮಣ್ಣನಾಯಕ, ಸುಬ್ಬನೀಸ ಕೃಷ್ಣಪ್ಪಯ್ಯ, ರಾಜಮನೆತನದಿಂದ ತಮಗೆ ಸಿಗಬೇಕಾದ ಗೌರವ ಸಿಗಲಿಲ್ಲವೆಂಬ ನೋವಿನಿಂದ ಕೆಳದಿ ಬಿಟ್ಟು ಹೋದರು, ಜಾತಪ್ಪನ ಭದ್ರಪ್ಪನ ಮಗ ಸದಾಶಿವನಿಗೆ ತಮ್ಮಲ್ಲಿ ಸಹಾಯ ಯಾಚಿಸಿದಾಗ ನೀಡಲು ಸಿದ್ದರಾದರು.

ಕವಲೇದುರ್ಗದಲ್ಲಿ ಚೆನ್ನಮ್ಮ ಮರಳಿ ತನ್ನ ಸಿಂಹಾಸನವನ್ನು ಪಡೆಯಲು ಸೂಕ್ತ ಸಮಯಕ್ಕಾಗಿ ಕಾಯುತ್ತಾ ಕುಳಿತಳು, ಅಸಮರ್ಥ ಶಿವಪ್ಪ ನಾಯಕನ ದುರಾಡಳಿತದಿಂದ ನೊಂದ ಜನ ರಾಣಿಯ ಪುನರ್ ಆಗಮನವನ್ನು ಎದುರು ನೋಡುತ್ತಿದ್ದರು, ಈ ಸಂದರ್ಭದಲ್ಲಿ ರಾಜ ಮನೆತನದಿಂದ ದೂರವಾಗಿದ್ದ ತಿಮ್ಮಣ್ಣನಾಯಕ ಸುಬ್ಬನೀಸ ಕೃಷ್ಣಪ್ಪಯ್ಯನವರನ್ನು ಮರಳಿ ವಿಶ್ವಾಸಕ್ಕೆ ತೆಗೆದುಕೊಂಡು ಭುವನಗಿರಿ ದುರ್ಗದಲ್ಲಿ ರಾಣಿ ಚೆನ್ನಮ್ಮಾಜಿಯ ಪಟ್ಟಾಭಿಷೇಕವಾಯಿತು.

ರಾಜ ಕುಟುಂಬದವಳಲ್ಲದ ಚೆನ್ನಮ್ಮ, ರಾಜಕುಮಾರನನ್ನು ಮದುವೆಯಾಗಿ ರಾಜ್ಯದ ರಾಣಿಯಾಗುತ್ತಾಳೆ. ಕೆಳದಿ ರಾಜ್ಯದ ಪ್ರಥಮ ಮಹಾರಾಣಿಯಾಗುತ್ತಾಳೆ. ಹಲವು ಪುರುಷ ಮನಸುಗಳ ವಿರೋಧ ದ್ವೇಷ– ದಾಳಿಗಳ ನಡುವೆಯೂ ಕೆಚ್ಚೆದೆಯಿಂದ ಮಹತ್ವಾಕಾಂಕ್ಷೆಯ ರಾಣಿಯಾಗಿ, ಓರ್ವ ತಾಯಿಯಾಗಿ, ತಂದೆಯಾಗಿ, ಪಾಲಕಳಾಗಿ ರಾಜ್ಯವನ್ನು ನಡೆಸುತ್ತಾಳೆ.

ಸೋಮಶೇಖರ ನಾಯಕನ ಸಾವಿನ ನೋವು ಎದೆಯಲ್ಲಿ ಕಿಂಚಿತ್ತು ಕಡಿಮೆಯಾಗದಿದ್ದರೂ ಅದನ್ನು ಮರೆಯಲು ಜನ ಉಪಯೋಗಿ ಕಾರ್ಯದಲ್ಲಿ ತೊಡಗಿಕೊಂಡಳು, ಆಡಳಿತದ ಎಲ್ಲಾ ಕ್ಷೇತ್ರದಲ್ಲೂ ಕಣ್ಣರಳಿಸಿ ಕ್ರಮ ಕೈಗೊಂಡು

ಪಾರದರ್ಶಕತೆಯನ್ನು ತಂದರು ರಾಜ್ಯದಲ್ಲಿ ನಡೆಯುತ್ತಿದ್ದ ಕಳ್ಳತನ ದರೋಡೆಗಳಿಗೆ ತಡೆಯೊಡ್ಡಿದಳು, ಕೆರೆ ಬಾವಿಗಳ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡ ಚೆನ್ನಮ್ಮ ಒಬ್ಬ ಆದರ್ಶ ರಾಣಿಯಾಗಿ ಆಳ್ವಿಕೆ ನಡೆಸಿದರು. ಸ್ತ್ರೀಯರು ಅಧಿಕಾರ ನಡೆಸಲು ಸಶಕ್ತರೆಂಬ ನೀತಿ ಈ ಪಾತ್ರದಲ್ಲಿ ಅಭಿವ್ಯಕ್ತಿಗೊಂಡಿದೆ.

ಸರ್ವ ಶ್ರೇಷ್ಠ ರಾಣಿಯಾಗಿ ಚೆನ್ನಮ್ಮ ರಾಜ್ಯವನ್ನು ಸುಸೂತ್ರವಾಗಿ ಆಳ್ವಿಕೆ ನಡೆಸಿದಳು. ರಾಜ್ಯದ ಮುಂದಿನ ವಾರಸುದಾರ ಯಾರು ಎಂಬ ಪ್ರಶ್ನೆಗೆ ಉತ್ತರವೆಂಬಂತೆ ಬಸಪ್ಪವೆಂಬ ಮಗುವನ್ನ ರಾಜಗುರುಗಳು ಮತ್ತು ಎಲ್ಲಾ ಹಿರಿಯರ ಒಪ್ಪಿಗೆ ಪಡೆದು ದತ್ತು ತೆಗೆದುಕೊಂಡು, ಕೆಳದಿನೃಪಾಲ ಬಸಪ್ಪ ನಾಯಕ ಎಂದು ಹೆಸರಿಟ್ಟು ಕೆಳದಿ ಧರ್ಮ ಸಂಸ್ಥಾನದ ಹಕ್ಕುದಾರ ಎಂದು ಘೋಷಿಸುತ್ತಾಳೆ. ಚೆನ್ನಮ್ಮ ಜನಸಾಮಾನ್ಯರ ಹಿತ ಚಿಂತಕಿಯು ಕರುಣಾಮಯಿಯು ಆಗಿದ್ದಳು ಪ್ರಜಾನುರಾಗಿಯಾಗಿ ಅವಳು ಆಡಳಿತ ನಡೆಸಿದಳು. ಮುರುಗೆಯಮ್ಮ ತಳವಾರ ನಾಗ ರಾಜ್ಯಕ್ಕಾಗಿ ಮಾಡಿದ ಸೇವೆ ಅವನ ಸಾವಿನ ಕಥೆ ಆತನ ಕುಟುಂಬದವರ ಕಷ್ಟವನ್ನು ಹೇಳಿದಾಗ ಚೆನ್ನಮ್ಮನ ಹೃದಯ ಹಿಂಡಿದಂತಾಗಿ ಹಾಗೆ ನಾಗನ ಕುಟುಂಬ ಸಾಕಲು ವ್ಯವಸ್ಥೆ ಮಾಡುತ್ತಾಳೆ.

ಸೋದೆಯಲ್ಲಿ ಸಣ್ಣ ದಳಪತಿಯಾಗಿದ್ದ ಹನುಮನಾಯಕ ಕೋಟೆಯ ಪ್ರಧಾನಿಯಾಗಬೇಕೆಂಬ ಆಸೆಯಿಂದ ಮಿಡಚೆಕೋಟೆಯನ್ನು ವಶಪಡಿಸಿಕೊಂಡು ಅದನ್ನು ನೋಡಿಕೊಳ್ಳುತ್ತಿದ್ದ ಸರಪನಮಲ್ಲಿಕನನ್ನು ಕೋಟೆಯಿಂದ ಹೊರದೂಡುತ್ತಾನೆ. ಸರಪನಮಲ್ಲಿಕ ಚೆನ್ನಮ್ಮಾಳ ಬಳಿ ಬಂದು ದೂರು ಹೇಳಿದಾಗ, ಚೆನ್ನಮ್ಮ ಹನುಮನಾಯಕನಿಗೆ ರಾಯರಸವನ್ನು ಬರೆದು ಓಲೆಕಾರನನ್ನು ಕಳುಹಿಸಿದಳು. ಹನುಮನಾಯಕ ಅವನ ತಲೆ ಬೋಳಿಸಿ ಮುಖಕ್ಕೆ ಬಣ್ಣಹಚ್ಚಿ ನಿಂದಿಸಿ, “ಮಿಡಚೆಕೋಟೆಯಲ್ಲಿರುವವನು ಗಂಡಸು ಎಂದು ಹೇಳು ನಿಮ್ಮ ರಾಣಿಗೆ”[4] ಎಂದು ಹೇಳಿ ಕಳಿಸುತ್ತಾನೆ. ದುರಹಂಕಾರಿಯಾಗಿದ್ದ ಹನುಮನಾಯಕ ಕೆಳದಿ ಸೈನ್ಯವನ್ನು ಎದುರಿಸಲಾರದೆ ಸೋತು ಬಂಧಿಯಾಗುತ್ತಾನೆ. ಸೋದೆ ಅರಸರು ಬಿರುದು, ಪದಕ ಧ್ವಜ ಮುಂತಾದ ಅಮೂಲ್ಯ ವಸ್ತುಗಳನ್ನು ಸೈನಿಕರು ಹೊತ್ತು ತಂದರು. ‘ಮಿಡಚಕೋಟೆಯಲ್ಲಿ ಗಂಡಸು ಇರುವುದು ಎಂದು ಹೇಳು’, ಎಂದು ದುರಹಂಕಾರದ ಮಾತುಗಳನ್ನು ಆಡಿದ ನಾಯಕ ರಾಣಿಯ ಮುಂದೆ “ನನಗೆ ನನ್ನ ಸ್ಥಾನಮಾನ ಹಿಂತಿರುಗಿಸಿ.... ನಾನು ಸಾಮಂತನಾಗಿಯೇ ಮುಂದುವರಿಯುತ್ತೇನೆ”[5] ಎಂದು ಬೇಡಿಕೊಳ್ಳುತ್ತಾನೆ. ಸ್ತ್ರೀ ಎಂದರೆ ಕೀಳು ಆಕೆ ದುರ್ಬಲಳು ಪುರುಷನ ಅಡಿಯಾಳು ಎಂದು ಭಾವಿಸಿ ಉದ್ದಟತನದ ಮಾತುಗಳನ್ನು ಆಡಿದ ಹನುಮನಾಯಕ ಚೆನ್ನಮ್ಮನಿಗೆ ಕೈಮುಗಿದು ಶರಣಾಗುತ್ತಾನೆ. ಚೆನ್ನಮ್ಮ ಆತನಿಗೆ ಬಿರುದು, ಧ್ವಜ, ಪತಾಕೆ, ಮೇನೆ, ಕತ್ತಿಯನ್ನು ಹಿಂತಿರುಗಿಸಿ ಗೌರವದಿಂದ ಕಳುಹಿಸಿಕೊಡುತ್ತಾಳೆ. ಇದು ಆಕೆಯ ಸೌಜನ್ಯ ನಮ್ರತೆಯನ್ನು ಸಾರುತ್ತದೆ. ಅಲ್ಲದೆ ಕಲಾತ್ಮಕವಾದ ನೀಲಿ ಕೊಡೆಯನ್ನು ದೇವರಿಗೆ ಅರ್ಪಿಸಿ ತನ್ನ ಸರಳ ಸಜ್ಜನಿಕೆಯನ್ನು ತೋರಿಸುತ್ತಾಳೆ.

ಜನಸಾಮಾನ್ಯರಂತೆ ಬೆಳೆದ ಚೆನ್ನಮ್ಮಾಜಿ ಮದುವೆಯಾಗುವವರೆಗೆ ರಾಜ್ಯ

ಅಧಿಕಾರ ಯುದ್ಧ ಆಡಳಿತ ಮುಂತಾದ ಯಾವುದೇ ರಾಜಕೀಯ ಅಂಶಗಳನ್ನು ತಿಳಿಯದೆ ಬೆಳೆದ ಚೆನ್ನಮ್ಮ ಮಹಾರಾಣಿ ಚೆನ್ನಮ್ಮಾಜಿಯಾಗಿ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದು ದಕ್ಷವಾಗಿ ಆಡಳಿತ ನಡೆಸುತ್ತಾಳೆ. ಅವಳ ದಕ್ಷತೆ ದೂರದೃಷ್ಟಿ ಜಾಣ್ಮೆಗೆ ಸವಾಲು ಎಸೆಯುವ ಘಟನೆ ದೆಹಲಿ ಸುಲ್ತಾನ ಔರಂಗಜೇಬನ ಮಹಾಸೇನೆ ಮಲೆನಾಡಿಗೆ ಬರುವಂತಹ ಒಂದು ಘಟನೆ ಸಂಭವಿಸುತ್ತದೆ. ಶಿವಾಜಿಯ ಮಗ ರಾಜರಾಮನನ್ನು ಔರಂಗಜೇಬನ ಸೈನ್ಯ ಕೊಲ್ಲಲು ಹಿಂಬಾಲಿಸಿಕೊಂಡು ಬಂದಾಗ ಆತ ಕೆಳದಿಯವರ ರಕ್ಷಣೆಯನ್ನು ಬೇಡುತ್ತಾನೆ. ರಕ್ಷಣೆ ನೀಡಿದರೆ ದೆಹಲಿ ಸುಲ್ತಾನನನ್ನು ಎದುರಿ ಹಾಕಿಕೊಳ್ಳಬೇಕಿತ್ತು ಇಲ್ಲವಾದರೆ ಯಾಚಕನಿಗೆ ನಕಾರ ಸೂಚಿಸಬೇಕಿತ್ತು, ಚೆನ್ನಮ್ಮ ಧರ್ಮ ಸಂಕಟದಲ್ಲಿ ಸಿಲುಕುತ್ತಾಳೆ ರಾಜ್ಯದ ಗುರುಗಳು ಮತ್ತು ಹಿರಿಯರ ಜೊತೆ ಚರ್ಚಿಸಿ ಇದು ರಾಜಕುಮಾರರ ಪ್ರಾಣದ ಪ್ರಶ್ನೆ ಅಲ್ಲ ನಮ್ಮ ಅಭಿಮಾನದ ಪ್ರಶ್ನೆ ನಾವು ನಮ್ಮ ರಾಜ್ಯವನ್ನು ಪಣಕಿಟ್ಟಾದರೂ ರಾಜರಾಮನನ್ನು ಉಳಿಸಿಕೊಳ್ಳೋಣ ಎನ್ನುವ ಚೆನ್ನಮ್ಮನ ಮಾತು, ಆಕೆಯ ಧೈರ್ಯ ಸಾಹಸ ಶ್ಲಾಘನೀಯವಾಗಿದೆ. ಆಡಳಿತ ನಿರ್ವಹಣೆಯಲ್ಲಿ ಸ್ತ್ರೀಯರು ಒಂದು ಕೈ ಮೇಲು.

ತನ್ನನ್ನು ಎದುರಿಸುವವರೇ ಇಲ್ಲ ಇಂದು ಔರಂಗಜೇಬ ಮೆರೆಯುತ್ತಿರುವಾಗ ಮಲೆಯ ರಾಜ್ಯದ ಓರ್ವ ರಾಣಿ ಅವನಿಗೆ ಸವಾಲಾಗಿ ನಿಂತಳು ‘‘ರಾಜರಾಮನನ್ನು ನಮಗೆ ಬಿಟ್ಟುಕೊಡಿ. ಇಲ್ಲವೇ ನಮ್ಮೊಡನೆ ಯುದ್ಧಮಾಡಿ’’[6] ಎಂಬ ಸುದ್ದಿಯನ್ನು ತಂದ ದೂತ ಓ ಇಲ್ಲಿ ರಾಣಿಯ ದರ್ಬಾರೋ ಈ ಕೋಟೆ ಬಾಗಿಲೊಳಗೆ ನಾನು ತಲೆತಗ್ಗಿಸಿಕೊಂಡು ಹೋಗುವುದು ಅವಮಾನ ಎಂದು ಕೊಬ್ಬಿನಿಂದ ಉದ್ದಟತನದ ಮಾತುಗಳನ್ನು ಆಡಿದ ಇಲ್ಲಿ ಮಹಿಳೆಯರನ್ನು ಹಿಂದಿನ ಕಾಲದಲ್ಲಿ ಎಷ್ಟು ಕೇವಲವಾಗಿ ಕಾಣುತ್ತಿದ್ದರು ಎನ್ನುವುದನ್ನು ಗಮನಿಸಬಹುದು. ಒಬ್ಬ ದೂತ ಕೂಡ ಮಹಿಳೆ ಎಂದರೆ ತನಗಿಂತಲೂ ಕೀಳುವೆಂಬ ಭಾವನೆ ಆಗಿನ ಕಾಲದಲ್ಲಿ ಕಾಣಬಹುದು. ಆತನ ಮಾತಿಗೆ ಚೆನ್ನಮ್ಮ ಅವನು ಆ ತಲೆಯನ್ನು ಹೊತ್ತುಕೊಂಡು ತಿರುಗಿ ಹೋಗುತ್ತಾನಂತೋ ಎಂದು ವ್ಯಂಗ್ಯವಾಗಿ ನುಡಿಯುತ್ತಾಳೆ. ಕೊನೆಗೆ ಆತ ಮತ್ತೆ ತಲೆ ಎತ್ತಿಕೊಂಡು ತಿರುಗಿ ಹೋಗದೆ ಕಥೆಯಾಗಿ ಮಲೆಯ ರಾಜ್ಯದಲ್ಲಿ ಉಳಿದುಬಿಡುತ್ತಾನೆ. ಚೆನ್ನಮ್ಮ ತನ್ನ ಚಾಣಾಕ್ಷತನದಿಂದ ಕವಲೇದುರ್ಗಕ್ಕೆ ಹೋಗಿ ಔರಂಗಜೇಬನ ಸೈನ್ಯವು ತತ್ತರಿಸುವಂತೆ ಮಾಡಿದಳು. ಮೊಗಲ ಸೈನಿಕರು ಸೋಲನ್ನು ಒಪ್ಪಿಕೊಳ್ಳುವಂತೆ ಮಾಡಿದಳು. ಚೆನ್ನಮ್ಮನ ಈ ಐತಿಹಾಸಿಕ ಗೆಲುವು ಅವಳನ್ನು ಚೆನ್ನಮ್ಮಾಜಿಯನ್ನಾಗಿಸಿ ಚರಿತ್ರೆ ಪುಟದಲ್ಲಿ ಅವಳ ಹೆಸರನ್ನು ಅಜರಾಮರವನ್ನಾಗಿಸಿತು.

ಬೆನ್ನೆಲುಬಾಗಿದ್ದ ತಂದೆ ಸಿದ್ದಪ್ಪಶೆಟ್ಟಿಯ ಮರಣ ನಂತರ ಚೆನ್ನಮ್ಮಾಜಿ ತುಂಬಾ ಜರ್ಜರಿತಳಾಗುತ್ತಾಳೆ. ಹಳೆಯ ಕೊಂಡಿಗಳಲ್ಲಿ ಒಂದೊಂದಾಗಿ ಕಳಚಿಕೊಂಡು ಒಬ್ಬಳೇ ಆಗುತ್ತಿದ್ದೇನೆಂಬ ಕೊರಗಲ್ಲಿ ಕಣ್ಮುಚ್ಚುತ್ತಾಳೆ. ಮಗಳನ್ನು ರಾಜಮನೆತನಕ್ಕೆ ಕೊಟ್ಟು ತಪ್ಪು ಮಾಡಿದ ನಾನು ಎಂದು ಕೊರಗುತ್ತಿದ್ದ ಸಿದ್ದಪ್ಪಶೆಟ್ಟಿ ಔರಂಗಜೇಬನ ಸೈನ್ಯವನ್ನೋಡಿಸಿದ ಮಗಳನ್ನು ಪ್ರಶಂಸಿಸುತ್ತಾ ನೀನು ಆ ಸ್ಥಾನ ಗೌರವ ಬೆಳೆಸಿದೆ ‘ಅಮ್ಮಾಜಿ ನಿನ್ನ ಹೆಸರು ಶಾಶ್ವತವಾಗಿ ಉಳಿದುಬಿಡುತ್ತದೆ’’[7] ಎಂಬ ಮಾತು

ಅರ್ಥಪೂರ್ಣವಾದುದು. ಸುಮಾರು 25 ವರ್ಷಗಳ ಆಳ್ವಿಕೆಯನ್ನು ನಡೆಸಿದ ಚೆನ್ನಮ್ಮಾಜಿ ಒಬ್ಬ ಆದರ್ಶ ಮಹಿಳೆ ಪಿತೃಪ್ರಧಾನ ಸಮಾಜದಲ್ಲಿ ಮಹಿಳಾ ವಿರೋಧಿ ಪುರುಷ ಮನಸುಗಳ ನಡುವೆ ಸಿಂಹಾಸನವನ್ನೇರಿ ಸಮರ್ಥವಾಗಿ ಆಡಳಿತ ನಡೆಸಿ ರಾಜ್ಯವನ್ನು ಅಭಿವೃದ್ಧಿಗೊಳಿಸಿದ ಧೀಮಂತ ಮಹಿಳೆ ಔರಂಗಜೇಬನಂತಹ ಚಕ್ರವರ್ತಿಯನ್ನು ಎದುರಿಸಿ ನಿಂತ ದಿಟ್ಟ ಮಹಿಳೆ ಚೆನ್ನಮ್ಮಾಜಿ ಹುಟ್ಟಿನಿಂದಲೇ ಬಂದ ಆಕೆಯ ಧೈರ್ಯ ನಾಯಕತ್ವದ ಗುಣ ಮುಂತಾದ ಅಂಶಗಳು ಆಕೆಯನ್ನ ಗಟ್ಟಿಯಾಗಿ ನೆಲೆಗೊಳ್ಳುವಂತೆ ಮಾಡಿದವು.

‘ದೈಹಿಕವಾಗಿ ಬಲಾಢ್ಯವಾಗಿದ್ದರೆ ಮಾತ್ರ ಅವರು ನಾಯಕರಾಗಬೇಕೆಂದಿಲ್ಲ. ಬದಲಾಗಿ ಬುದ್ಧಿವಂತಿಕೆ, ಪ್ರಜ್ಞಾವಂತಿಕೆ, ಸೃಜನಶೀಲತೆ, ವಿನೂತನ ವಿಚಾರ ಇರುವವರು ನಾಯಕರಾಗಲು ಅರ್ಹರು. ಇಲ್ಲಿ ಸ್ತ್ರೀ ಪುರುಷ ಭೇದ ಬರುವುದಿಲ್ಲ’ ಎಂದು ನೊಬೆಲ್ ಪುರಸ್ಕೃತ ಕೀನ್ಯಾದ ಸಾಹಿತಿ ವಾಂಗರಿ ಮಥಾಯ್ ಹೇಳಿರುವ ಮಾತು ಚೆನ್ನಮ್ಮಾಳ ಚರಿತ್ರೆಯನ್ನು ನೋಡಿದಾಗ ಸತ್ಯ ಅನಿಸದೇ ಇರದು. ಕರ್ನಾಟಕದ ಚರಿತ್ರೆ, ಸಾಹಿತ್ಯ ಪರಂಪರೆಯಲ್ಲಿ ಸ್ತ್ರೀಯರು ಸಾಹಿತ್ಯ, ಸಂಗೀತ, ಆಡಳಿತ, ಯುದ್ಧ ಸ್ಥಾನೀಕ ಮಾಂಡಲಿಕ ಅಧಿಕಾರ ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ. ಅಂಥ ಒಂದು ಉತ್ತಮ ನಿದರ್ಶನ ನಿರೂಪಿಸುತ್ತದೆ ಈ ಕಾದಂಬರಿಯ ಚೆನ್ನಮ್ಮಾಜಿ ಪಾತ್ರ ಅದು ಲೇಖಕರ ಪ್ರಮುಖ ಆಶಯವೂ ಆಗಿದೆ.

**ಕೊನೆ ಟಿಪ್ಪಣಿಗಳು:**

1. ಡಿಸೋಜ ನಾ., (2020), ನಾಡಿ ಮಿಡಿತ (ಸಂಪುಟ–05), ಶಿಕಾರಿಪುರ: ಸುವ್ವಿ ಪಬ್ಲಿಕೇಷನ್ಸ್. ಪು.ಸಂ. 552
2. ಅದೇ, ಪು.ಸಂ. 596
3. ಅದೇ, ಪು.ಸಂ. 610
4. ಅದೇ, ಪು.ಸಂ. 668
5. ಅದೇ, ಪು.ಸಂ. 670
6. ಅದೇ, ಪು.ಸಂ. 683
7. ಅದೇ, ಪು.ಸಂ. 699

**ಪರಾಮರ್ಶನ ಗ್ರಂಥಗಳು:**

1. ಗುರುರಾವ್ ಬಾಪಟ್ ಮತ್ತು ವಿಲಿಯಂ (ಸಂ: ಮಾರ್ಷಲ್ ಶರಾಮ್), (2012), ಮಲೆನಾಡಿಗ, ಶಿವಮೊಗ್ಗ: ಗೀತಾಂಜಲಿ ಪುಸ್ತಕ ಪ್ರಕಾಶನ.
2. ಡಿಸೋಜ ನಾ., (2020), ನಾಡಿ ಮಿಡಿತ (ಸಂಪುಟ–05), ಶಿಕಾರಿಪುರ: ಸುವ್ವಿ ಪಬ್ಲಿಕೇಷನ್ಸ್.
3. ಸಫ್ರಾಜ್ ಚಂದ್ರಗುತ್ತಿ, (2011), ನಾ. ಡಿಸೋಜ ಎಂಬ ಶರಾವತಿಯ ನಾಲ್ಕು ಜಲಧಾರೆ, ಮೈಸೂರು: ಶ್ರುತಿಲೋಕ ಪ್ರಕಾಶನ.